# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 180

ಉತ್ತರಿಸಬೇಕಾದ ದಿನಾಂಕ : 14.02.2023

<table>
<tr><th>ಕ್ರ. ಸಂ</th><th>ಪ್ರಶ್ನೆಗಳು</th><th colspan="3">ಉತ್ತರಗಳು</th></tr>
<tr><td rowspan="4">ಅ</td><td rowspan="4">ವಿಜಯಪುರ ಮತ್ತು ಬಾಗಲಕೋಟೆ ಅವಳಿ ಜಿಲ್ಲೆಗಳಾಗಿದ್ದು ಸಹಕಾರ ಹಾಲು ಒಕ್ಕೂಟಕ್ಕೆ ಅತೀ ಹೆಚ್ಚು ರೈತರು ಹಾಲನ್ನು ಪೂರೈಸುತ್ತಿದ್ದು, ಈ ಎರಡು ಜಿಲ್ಲೆಗಳಿಂದ ಪ್ರತಿ ದಿನ ಎಷ್ಟು ಹಾಲು ಸಂಗ್ರಹಣೆಯಾಗುತ್ತಿದೆ: ಪ್ರತಿ ಲೀಟರ್‌ಗೆ ಸರ್ಕಾರವು ಎಷ್ಟು ಪ್ರೋತ್ಸಾಹಧನ ನಿಡಲಾಗುತ್ತಿದೆ. (ಜಿಲ್ಲಾವಾರು ಮಾಹಿತಿ ನೀಡುವುದು)</td><td colspan="3">ಪ್ರತಿ ದಿನ ಸಂಗ್ರಹಣೆಯಾಗುತ್ತಿರುವ ಹಾಲು (ಕೆ ಜಿ ಗಳಲ್ಲಿ)</td></tr>
<tr><td>ವಿಜಯಪುರಜಿಲ್ಲೆ</td><td>ಬಾಗಲಕೋಟೆಜಿಲ್ಲೆ</td><td>ಒಟ್ಟು</td></tr>
<tr><td>29730</td><td>130654</td><td>160384</td></tr>
<tr><td colspan="3">ಸರ್ಕಾರದಿಂದ ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ 5/- ರೂ ಪ್ರೋತ್ಸಾಹಧನವನ್ನು ನಿಡಲಾಗುತ್ತಿದೆ</td></tr>
<tr><td>ಆ</td><td>ಬಾಗಲಕೋಟೆ ಜಿಲ್ಲೆಯು ಸುಮಾರು 10 ತಾಲ್ಲೂಕನ್ನು ಹೊಂದಿದ್ದು, ಇಲ್ಲಿನ ರೈತರು ಸಹ ಹೆಚ್ಚು ಹಾಲು ಉತ್ಪಾದನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಈ ಜಿಲ್ಲೆಯ ರೈತರನ್ನು ಪ್ರೋತ್ಸಾಹಿಸಲು ಸರ್ಕಾರ ಕೈಗೊಂಡ ಕ್ರಮಗಳೇನು:</td><td colspan="3">ಅಂತಹ ಪ್ರಸ್ತಾವನೆಗಳು ಸರ್ಕಾರದ ಮುಂದೆ ಇರುವುದಿಲ್ಲ.</td></tr>
<tr><td>ಇ</td><td>ಬಾಗಲಕೋಟೆ ನವನಗರದಲ್ಲಿ ಒಂದು ಲಕ್ಷ ಲೀಟರ್ ಸಾಮರ್ಥ್ಯದ ನೂತನ ಮೆಗಾ ಡೈರಿ ಸ್ಥಾಪಿಸಲು ಸರ್ಕಾರ ಚಿಂತನೆ ನಡೆಸಿದೆಯೇ: ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸ್ಥಾಪಿಸಲು ಕ್ರಮ ಕೈಗೊಳ್ಳುವುದು: ಇಲ್ಲದಿದ್ದಲ್ಲಿ ಇರುವ ಅಡಚಣೆಯಾದರೂ ಏನು: (ವಿವರ ನಿಡುವುದು)</td><td colspan="3">ಒಕ್ಕೂಟವು Green Food Park ನಲ್ಲಿ 7 ಎಕರೆ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಪಡೆದಿದ್ದು, ಒಕ್ಕೂಟದ ಮೂಲಭೂತ ಸೌಕರ್ಯ ನಿಧಿಯಿಂದ ದಿನವಹಿ 50 ಸಾವಿರದಿಂದ 1 ಲಕ್ಷ ಲೀ ಸಾಮರ್ಥ್ಯದ ನೂತನ ಡೇರಿಯನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ. ಪ್ರಸ್ತುತ ಸಿವಿಲ್ ಕಾಮಗಾರಿ ಪೂರ್ಣಗೊಂಡಿದ್ದು ಎಲೆಕ್ಟ್ರಿಕ್ ಮತ್ತು ಮೆಕ್ಯಾನಿಕಲ್ ಕಾಮಗಾರಿಯು ಚಾಲ್ತಿಯಲ್ಲಿರುತ್ತದೆ.</td></tr>
<tr><td>ಈ</td><td>ಬಾಗಲಕೋಟೆ ನವನಗರದಲ್ಲಿ ಈಗಾಗಲೇ ಸ್ಥಳ ಗುರುತಿಸಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆ.ಐ.ಎ.ಡಿ.ಬಿ) ಯಿಂದ ಜಮೀನು ಒದಗಿಸಿರುವುದು ಸರ್ಕಾರದ ಗಮನಕ್ಕೆ ಬಂದದಿದೆಯೇ;<br>ಹೌದಾದಲ್ಲಿ ಪ್ರತ್ಯೇಕ ಮೆಗಾ ಡೈರಿ ಸ್ಥಾಪಿಸಲು ಸರ್ಕಾರ ಆಸಕ್ತಿ ವಹಿಸದಿರುವುದರಿಂದ ಆ ಭಾಗದ ರೈತರು ಕಳವಳ ವ್ಯಕ್ತಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)</td><td colspan="3">ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಪಡೆದಿರುವ 7 ಎಕರೆ ಜಮೀನಿನಲ್ಲಿ ಒಕ್ಕೂಟವು ನಿರ್ಮಿಸುತ್ತಿರುವ ದಿನವಹಿ 50 ಸಾವಿರದಿಂದ 1 ಲಕ್ಷ ಲೀ ಸಾಮರ್ಥ್ಯದ ನೂತನ ಡೇರಿಯಲ್ಲಿ ಕಾಮಗಾರಿಯನ್ನು ತ್ವರಿತಗೊಳಿಸಿ ಕಾರ್ಯಾರಂಭಗೊಳಿಸಲಾಗುವುದು.</td></tr>
</table>

...2

| | | |
|---|---|---|
| ಉ | ಜಮಿನು ಒದಗಿಸಿದ್ದರು ಸಹ ಪ್ರತ್ಯೇಕ ಮೆಗಾ ಡೈರಿ ಸ್ಥಾಪಿಸಲು ಸರ್ಕಾರ ಆಸಕ್ತಿ ವಹಿಸದೇ ಇರುವುದರಿಂದ ಈ ಭಾಗದ ರೈತರು ಕಳವಳ ವ್ಯಕ್ತಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ ಕುರಿತು ಸರ್ಕಾರದ ಚಿಂತನೆಯೇನು ? | ಅನ್ವಯಿಸುವುದಿಲ್ಲ |

ಇ- ಪಸಂಮೀ 39 ಸಲೆವಿ 2023

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು